ಒಬ್ಬಟ್ಟು ತುಪ್ಪ ಅಥವಾ ಹೋಳಿಗೆ ತುಪ್ಪ ಎಲ್ಲರಿಗೂ ಇಷ್ಟವೇ! ಮದುವೆ ಗೊತ್ತಾಗುವುದಕ್ಕೆ 'ನಿಶ್ಚಿತಾರ್ಥ ಆಯಿತು', 'ಎಂಗೇಜ್ಮೆಂಟ್ ಆಯಿತು', 'ಮದುವೆ ನಿಕ್ಕಿ ಆಯಿತು' ಎನ್ನುತ್ತೇವೆ. ಆದರೆ, ತಮಿಳು ಅಯ್ಯಂಗಾರರಲ್ಲಿ ಮದುವೆ ಗೊತ್ತಾದದ್ದನ್ನು 'ಒಬ್ಬಟ್ ನೆಯ್' ('ಒಬ್ಬಟ್ ನೆಯ್ ಆಚ?' ಎಂದರೆ 'ಹೋಳಿಗೆ ತುಪ್ಪ ಆಯಿತಾ?') ಎಂಬ ಮಾತಿನಿಂದ ಕರೆಯುತ್ತಾರೆ. ಗಂಡು ಹೆಣ್ಣು ಒಟ್ಟಾಗಿ ಬಾಳಲಿದ್ದಾರೆ ಎಂದು ಪ್ರಕಟಿಸುವ ಸಂಬಂಧ ಸೂಚಕ ಸಮಾರಂಭಕ್ಕೆ ಹೋಳಿಗೆಯಂತಹ ಅಪ್ಪಟ ದೇಸಿ ಸಿಹಿ ತಿಂಡಿಯ ಹೆಸರು ಎಷ್ಟು ವಿಶೇಷ, ಅಲ್ಲವೆ?

ಜನಪದ ಸಾಹಿತ್ಯದಲ್ಲೂ ಹೋಳಿಗೆಯ ಉಲ್ಲೇಖವನ್ನು 'ಒಂದು ಹೋಳಿಗೆ ನೂರಾಳಿಗೆ' (ಚಂದ್ರ) ಎಂಬ ಒಗಟಿನಲ್ಲೂ, 'ಹೋಳಿಗೆ ತಿಂದವ ಏಳಿಗೆ ಆಗ' ಎಂಬ ಗಾದೆಯಲ್ಲೂ ನೋಡಬಹುದು. ಸರ್ವಜ್ಞ ಬಹಳ ಹಿಂದೆಯೇ 'ಹೋಳಿಗೆ ತುಪ್ಪ ಉಣಲೇಸು, ಬಾಯಿಗೆ ವೀಳೆಯವು ಲೇಸು' ಎಂದು ಒಂದು ತ್ರಿಪದಿಯಲ್ಲಿ ಹೇಳಿದ್ದಾನೆ.

ಇನ್ನು ಬೇರೆ ಬೇರೆ ಸಂಪ್ರದಾಯಗಳಲ್ಲೂ ಅವರವರ ಪದ್ಧತಿಯಂತೆ ಹೆಣ್ಣು ಮಕ್ಕಳು ಋತುಮತಿಯರಾದಾಗ, ಮದುವೆ ಸಂದರ್ಭದಲ್ಲಿ, ಸೀಮಂತಕ್ಕೆ, ಬಾಣಂತಿಯರನ್ನು ನೋಡಲು ಹೋಗುವಾಗ ಬಗೆ ಬಗೆಯ ಆ ಸಂದರ್ಭಕ್ಕೆ ವಿಶೇಷವಾಗಿರುವ ಸಿಹಿ ತಿನಿಸುಗಳನ್ನು ಒಯ್ಯುವುದಿದೆ. ಮಧುರವಾದ ಭಾವನೆಗಳನ್ನು ವ್ಯಕ್ತಪಡಿಸಲು ಸುಲಭ ಮಾರ್ಗ ಸಿಹಿ ತಿನಿಸುಗಳೇ.

ತಿಂಡಿಗಳಲ್ಲೂ ವೈವಿಧ್ಯವಿದೆ. ಸುಬ್ರಹ್ಮಣ್ಯ ಷಷ್ಠಿಗೆ ಕಿಚಡಿ, ಧನುರ್ಮಾಸಕ್ಕೆ ಸಿಹಿ–ಖಾರ ಪೊಂಗಲ್, ಶಿವರಾತ್ರಿಗೆ ಉಪ್ಪಿಟ್ಟು, ಯುಗಾದಿಗೆ ಹುಳಿಯನ್ನ, ಮಾವಿನಕಾಯಿ ಚಿತ್ರಾನ್ನ ಇತ್ಯಾದಿ ತಿಂಡಿಗಳಿವೆ. ವೈಕುಂಠ ಏಕಾದಶಿ ದಿವಸಕ್ಕಂತೂ ಅವರೆಕಾಳು ಉಪ್ಪಿಟ್ಟನ್ನೇ ಮಾಡುವುದು. ಅವರೆಕಾಳು ಸೇರಿಸಿ ತೆಳ್ಳಗೆ ಮಾಡಿದ ಬಿಸಿ ಬಿಸಿಯಾದ ಘಮ್ಮೆನ್ನುವ ಉಪ್ಪಿಟ್ಟನ್ನು ದೊನ್ನೆಯಲ್ಲಿ ಕೊಟ್ಟರಂತೂ ತುಂಬಾ ಮಜವಾಗಿರುತ್ತದೆ. ನೋಡನೋಡುತ್ತಲೇ ಉಪ್ಪಿಟ್ಟು ಖಾಲಿಯಾಗಿರುತ್ತದೆ.

ಜೂನ್ 21, 2020ರಂದು ಸಂಭವಿಸಿದ್ದ ಸೂರ್ಯಗ್ರಹಣ ವೀಕ್ಷಣೆಯ ಸಂದರ್ಭದಲ್ಲಿ ವಿಚಾರವಾದಿ ಎಚ್. ನರಸಿಂಹಯ್ಯನವರ ಜನ್ಮ ಶತಮಾನೋತ್ಸವದ ಅಂಗವಾಗಿ ಅವರಿಗೆ ಪ್ರಿಯವಾದ ಉಪ್ಪಿಟ್ಟು ಮತ್ತು ಮಂಡಕ್ಕಿಯ ವ್ಯವಸ್ಥೆ ಮಾಡಲಾಗಿತ್ತು ಎನ್ನುವ ಸುದ್ದಿ ವಿಶೇಷವೇ. ಇಂಥ ಪ್ರಯತ್ನಗಳಿಂದಾದರೂ ಉಪ್ಪಿಟ್ಟೆಂದರೆ ಮೂಗುಮುರಿಯುವವರ ಸಂಖ್ಯೆ ಕಡಿಮೆಯಾಗಬಹುದೇನೋ? ತೀರಾ ದುಬಾರಿಯಲ್ಲದ, ಜೇಬಿಗೆಟಕುವ, ಮನಸ್ಸಿಗೆ ಹಿಡಿಸುವ ಉಪಹಾರ ಉಪ್ಪಿಟ್ಟು.

ಎಲ್ಲರೂ 'ಉಪ್ಪಿಟ್ಟೂ ಐ ಲೈಕ್ ಯು ಟೂ' ಎನ್ನುವ ಹಾಗಾಗಲಿ. ನಾಲಗೆಯ ರುಚಿಯನ್ನು ಉಪ್ಪಿಟ್ಟು ಹೆಚ್ಚಿಸಲಿ. ಸಂಬಂಧಗಳ ರುಚಿಯನ್ನು, ಭಾವನೆಗಳನ್ನು ನಮ್ಮ ತಿಂಡಿಗಳು ಬೆಳೆಸಲಿ.

**ಸುಮಾವೀಣಾ**

ಹಾಸನದವರಾದ ಲೇಖಕಿ ವೃತ್ತಿಯಿಂದ ಕನ್ನಡ ಉಪನ್ಯಾಸಕಿ. ಪತ್ರಿಕೆಗಳಲ್ಲಿ ತಮ್ಮ ಬರಹಗಳನ್ನು ಪ್ರಕಟಿಸಿದ್ದಾರೆ. ಸಾಹಿತ್ಯಕ್ಕೆ ಸಂಬಂಧಿಸಿದ ಅವರ ಭಾಷಣಗಳು ಆಕಾಶವಾಣಿಯಿಂದ ಪ್ರಸಾರವಾಗಿವೆ. 'ನಲವಿನ ನಾಲಗೆ', 'ಮನಸ್ಸು ಕನ್ನಡಿ' ಮೊದಲಾದ ಪ್ರಬಂಧ ಸಂಕಲನಗಳು, 'ಶೂರ್ಪನಖಿ ಅಲ್ಲ ಚಂದ್ರನಖಿ' ಎಂಬ ನಾಟಕ ಅಚ್ಚಾಗಿದೆ.